ವರದಿಯನ್ನೊಪ್ಪಿಸುವುದು.

ಶ್ರೀ ಡಿ.ಎ. ಚಿನ್ನಪ್ಪ (ಅಧ್ಯಕ್ಷರು, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪರಿಶೀಲನಾ ಸಮಿತಿ) : ಮಾನ್ಯ ಅಧ್ಯಕ್ಷರೇ, ಸಭೆಯ ಮುಂದಿಡಲಾದ ಕಾಗದ ಪತ್ರಗಳ ಪರಿಶೀಲನಾ ಸಮಿತಿಯ ಎಂಟನೆಯ ವರದಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

ನಿಲುವಳಿ ಸೂಚನೆ

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾವು ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೇವೆ. ಆದರ ಸಂಬಂಧವಾಗಿ ಇವತ್ತು ತಾವು ಒಂದು Calling Attention Motion ಕೂಡ ಅಡ್‌ಮಿಟ್ ಮಾಡಿದ್ದೀರಿ. ಅದು ಬಹಳ ಮುಖ್ಯವಾದ ಪ್ರಶ್ನೆ. ಅದನ್ನು ಸದಸ್ಯರು ಒಪ್ಪುವುದಾದರೆ,

ಅಧ್ಯಕ್ಷರು : ಅದು ಯಾವುದು?

ಶ್ರೀ ಆರ್.ವಿ. ದೇಶಪಾಂಡೆ : ಪ್ರೈಮರಿ ಸೊಸೈಟೀಸ್‌ಗೆ ನಾಮಿನೇಷನ್ ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ನನಗೆ ಮಾನ್ಯ ಸಹಕಾರ ಸಚಿವರು ಕಾಗದ ಬರೆದಿದ್ದಾರೆ. ಅವರು ಆ ಮನೆಯಲ್ಲಿ ಐದು ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕಾಗಿದೆ. ಅದಕ್ಕಾಗಿ ನಾಳೆ ತೆಗೆದುಕೊಳ್ಳಲು ಕೇಳಿದ್ದಾರೆ?

ಶ್ರೀ ಡಿ.ಬಿ. ಚಂದ್ರೇಗೌಡ : ಚರ್ಚೆ ಮಾಡಬಹುದು, ನಾಳೆ ತೆಗೆದುಕೊಳ್ಳಿ, ತೊಂದರೆ ಇಲ್ಲ, We have no objection.

ಶ್ರೀ ಆರ್.ವಿ. ದೇಶಪಾಂಡೆ : ನಮಗೆ ನಾಳೆ ತೆಗೆದುಕೊಂಡರೆ ತಕರಾರು ಇಲ್ಲ. ಪ್ರೈಮರಿ ಸೊಸೈಟಿಗಳಿಗೆ ರಾಜ್ಯದ ಇತಿಹಾಸದಲ್ಲಿ ಯಾವಾಗಲು ನಾಮಿನೇಷನ್ ಆಗಿಲ್ಲ. ಅಲ್ಲಿ ನಾಮಿನೇಷನ್ ಮಾಡಲು ಹೊರಟಿದ್ದಾರೆ. ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದು 15 ದಿವಸದಲ್ಲಿ ಆಗುವ ಚುನಾವಣೆ 45 ದಿವಸದಲ್ಲಿ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ನಾಳೆ ಇಲ್ಲದಿದ್ದರೆ ನಾಡಿದ್ದು ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಚುನಾವಣೆ ಮುಗಿದುಹೋಗಿದೆ. ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆಗೆ ನಾಮಿನೇಷನ್ ಮಾಡತಕ್ಕಂಥ ಪ್ರಯತ್ನ ನಡೆದಿದೆ. ಇದರ ಬಗ್ಗೆ ಸರ್ಕಾರದ ಆಲೋಚನೆ ಏನು?

(ಗೊಂದಲ)

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಈ ಒಂದು ಸರ್ಕಾರಿ ಆಜ್ಞೆ ಏನು ಮಾಡಿದ್ದಾರೆ. ಬಹುಶಃ ಕರ್ನಾಟಕದಲ್ಲೇ ಅಲ್ಲ. ಎಲ್ಲೂ ಕೂಡ ನಾನು ನೋಡಲಿಲ್ಲ. ನಾನು ಸುಮಾರು 30 ವರ್ಷಗಳಿಂದ ಈ ಒಂದು ಸಹಕಾರಿ ರಂಗದಲ್ಲಿ ಕೆಲಸ ಮಾಡಿದ್ದೇನೆ, ನಾನು ಯಾವತ್ತೂ ಈ ರೀತಿಯ ಆಜ್ಞೆಯನ್ನು ನೋಡಿಲ್ಲ. ನಾನು ಹಲವಾರು ಜನ ಸಹಕಾರಿ ಮಂತ್ರಿಗಳನ್ನು ನೋಡಿದ್ದೇನೆ. ನಾನು 3 ವರ್ಷ ಸಹಕಾರಿ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ನಾನು ಸಹಕಾರಿ ಮಂತ್ರಿಗಳ ಹತ್ತಿರ ಈ ಬಗ್ಗೆ ಮಾತನಾಡಿದ್ದೇನೆ. ತಮ್ಮಲ್ಲಿ ನನ್ನ ಪ್ರಾರ್ಥನೆ ಇಷ್ಟೆ. ಒಂದು ಅಡ್ಜರ್ನಮೆಂಟ್ ಮೋಷನ್ ಕೊಟ್ಟಿದ್ದೇವೆ. ತಾವು ಅದನ್ನು ಅಡ್ಮಿಟ್ ಮಾಡಲು ಕಷ್ಟವಾಗುತ್ತದೆ ಎಂದು ನನಗೆ ಗೊತ್ತಿದೆ. ತಾವು ಅರ್ಧ ಗಂಟೆ ಚರ್ಚೆಗೆ ಅಲೋ ಮಾಡಿ. ಈ ಅರ್ಧ

ಗಂಟಿ ಚರ್ಚೆಯನ್ನು ನಾಳೆ ಸಂಜೆ 5ಗಂಟೆಗೆ ತೆಗೆದುಕೊಳ್ಳಬೇಕು. ಬೆಳಿಗ್ಗೆ ತೆಗೆದುಕೊಂಡರೆ ಸ್ವಲ್ಪ ಅನಾನುಕೂಲವಾಗುತ್ತದೆ. ಈವತ್ತು ಸಂಜೆ 5-00 ಗಂಟೆಗೆ ಅಥವಾ ನಾಳೆ ಸಂಜೆ 5-00ಗಂಟೆಗೆ ತೆಗೆದುಕೊಂಡರೆ ಅನುಕೂಲವಾಗುತ್ತದೆ ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಎಲ್ಲಾ ಸರ್ಕಾರಗಳನ್ನು ನಾಮಕರಣ ಮಾಡುತ್ತಾ ಬಂದಿವೆ. ಆದರೆ ಪ್ರಾಥಮಿಕ ಸಹಕಾರ ಸಂಘಕ್ಕೆ ಇವತ್ತಿನವರೆಗೆ ಯೂರೂ ನಾಮಕರಣ ಯಾರೂ ಮಾಡಿಲ್ಲ, ಚುನಾವಣೆ ನಿಲ್ಲಬಾರದು, ಚುನಾವಣೆ ಆಗಬೇಕಾಗುತ್ತದೆ. ಆದರೆ ಪ್ರಾಥಮಿಕ ಸಹಕಾರ ಸಂಘಗಳಿಗೆ ನಾಮಿನೇಷನ್ ಮಾಡುವುದಿಲ್ಲ ಎಂಬ ಬಗ್ಗೆ ಸ್ಪಷ್ಟವಾದ ಭರವಸೆ ಬೇಕಾಗುತ್ತದೆ. ಈ ವಿಚಾರವನ್ನು ನಾಳೆಯಾದರೂ ತೆಗೆದುಕೊಳ್ಳಿ. ನಿಮಗೆ ಅನುಕೂಲವಾದಾಗ ತೆಗೆದುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯ್ಲಿ : ಸನ್ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಹಕಾರ ಸಚಿವರು ಇವತ್ತು ಗಮನ ಸೆಳೆಯುವ ಸೂಚನೆ ಬಗ್ಗೆ ಏಕೆ ಆಗುವುದಿಲ್ಲವೆಂದು ಎಂಬುದನ್ನು ತಿಳಿಸಿದ್ದಾರೆ. ಇವತ್ತು ಅವರಿ ವಿಧಾನ ಪರಿಷತ್ತಿನಲ್ಲಿ ಬೇರೆ ಕಾರ್ಯಕಲಾಪಗಳ ಕಾರ್ಯಕ್ರಮಗಳು ಇರುವುದರಿಂದ ಇಲ್ಲಿ ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಇಲ್ಲದಿದ್ದರೆ ಇವತ್ತೇ ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧ ಇದೆ. ಆದ್ದರಿಂದ ಇದನ್ನು ಮುಂದೂಡಬೇಕಾದ ಅವಶ್ಯಕತೆ ಇಲ್ಲ. ತಾವು ಆತಂಕ, ಅನುಮಾನ ಪಡಬೇಕಾದ ಅವಶ್ಯಕತೆ ಇಲ್ಲ. ಇದನ್ನು ನಾಳೆ ಎಷ್ಟು ಹೊತ್ತಿಗಾದರೂ ತೆಗೆದುಕೊಳ್ಳಬಹುದು. ಸರ್ಕಾರ ಉತ್ತರ ಕೊಡುವುದಕ್ಕೆ ಸಿದ್ಧವಿದೆ. ಒಂದು ಮಾತನ್ನು ಇಲ್ಲಿ ಹೇಳಲು ಸಿದ್ಧನಿದ್ದೇನೆ. ಯಾವುದೇ ಒಂದು ಕಾನೂನಿನ ಕಲಂಮನ್ನು ಅಥವಾ ಕಾನೂನಿನಲ್ಲಿ ಅಳವಡಿಸತಕ್ಕ ನಿಯಮಾವಳಿಯನ್ನು ನಾವು ಈ ಸದನದವರು ಒಂದೇ ಸಮನೆ ಸಸ್ಪೆಂಡ್ ಮಾಡುತ್ತೇವೆಂದು ಹೇಳತಕ್ಕ ಮಾತು ಅನುವಾಗುವುದಿಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ನಾವು ಸಹಕಾರದ ಕಾನೂನಿನ ನಿಬಂಧನೆಗಳಿಗೆ ವಿರುದ್ಧವಾಗಲಿ ನಿಯಮಾವಳಿಗಳ ವಿರುದ್ಧವಾಗಲಿ ನೇಮಕಾತಿಯಾಗಲಿ ಯಾವುದೇ ಕಾರ್ಯಕ್ರಮ ಸರ್ಕಾರ ಮಾಡುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಚುನಾವಣೆ ಮಾಡಬೇಕೆಂದು ನಾವು ಕೇಳುವುದು.

(ಗೊಂದಲ)

Sri R.V. Deshpande : Sir, This order has been laid on Sesion only to facilitate, they can nominate to the Primary Societies. If nomination is prepared to say that law dominates....

ಅಧ್ಯಕ್ಷರು : ಪ್ರಶ್ನೆ ಇಷ್ಟೆ ನಾಗಮಾರಪಲ್ಲಿಯವರೆ, ಅವರು ನಾಮಿನೇಷನ್ ಮಾಡಬೇಕು ಎಂದು ನಿರ್ಧಾರ ತೆಗೆದುಕೊಂಡರೆ ಅದನ್ನು ಪ್ರತಿಭಟನೆ ಮಾಡುವುದಕ್ಕೆ ಸಾಧ್ಯವಿದೆಯೇ ?

(ಗೊಂದಲ)

ಅಧ್ಯಕ್ಷರು : ಮಾಡಾದ ಮೇಲೆ ಪ್ರತಿಭಟನೆ ಮಾಡಿ. ನಾನು ಅರ್ಥಮಾಡಿಕೊಂಡಿರುವುದು ಏನೆಂದರೆ, ದೇಶಪಾಂಡೆಯವರು ಹೇಳಿದರು. ನಾಮಿನೇಷನ್ ಮಾಡಬಹುದು. ಪ್ರೈಮರಿಗೆ ಮಾಡಬೇಕೆ ಎ.ಪಿ.ಎಂ.ಸಿ. ಮಾಡಬೇಕೆ ಎನ್ನುವುದು ಅವರ ಪ್ರಶ್ನೆ. ಪ್ರೈಮರಿ ಬಿಟ್ಟು ಬಿಡಿ. ಬರೀ ಎಪೆಕ್ಸ್‌ಸು ಮಾಡಿ ಎಂದು ಹೇಳಿ.

(ಗೊಂದಲ)

Sri R.V. Deshpande : The Cor-operation Minister himself said...
(Interruptions)

ಅಧ್ಯಕ್ಷರು : ಸಹಕಾರ ಸಚಿವರು ಬಂದು ನಾವೆ ಏನು ಹೇಳುತ್ತಾರೆ ನೋಡೋಣ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ : ವಿರೋಧ ಪಕ್ಷದ ಸದಸ್ಯರಿಗೆ ತುಂಬಾ ಅಭಿನಂದನೆಗಳನ್ನು ಸಲ್ಲಿಸಬೇಕು. ಏಕೆಂದರೆ, ಅವರಿಗೆ ನಮ್ಮ ಸಹಕಾರಿ ಸಚಿವರ ವಿಚಾರದಲ್ಲಿ ಸಂಪೂರ್ಣವಾದ ವಿಶ್ವಾಸ ಇದೆ, ನಂಬಿಕೆ ಇದೆ. ಆ ವಿಶ್ವಾಸ, ನಂಬಿಕೆಗೆ ವಿರುದ್ಧವಾಗಿ ಸಹಕಾರ ಸಚಿವರು ಹೋಗುವುದಕ್ಕೆ ಸಾಧ್ಯವಿದೆಯೇ ಹೇಳಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಈಗ ಪತ್ರಿಕೆಗಳಲ್ಲಿ ಬಂದಿದೆ.

(ಗೊಂದಲ)

12.30 ಪಿ.ಎಂ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮೊಯಿಲಿಯವರು ಕಾನೂನಿಗೆ ವಿರುದ್ಧವಾಗಿ ಏನು ಮಾಡುವುದಿಲ್ಲವೆಂದು ಹೇಳಿದರು. ಮಾಡುವುದಿಲ್ಲ ಬೇಸಿಕ್ ಆಗಿ ನಿಮ್ಮ ಹತ್ತಿರ ಕಾನೂನಿಗೆ ಬೆಲೆಯೇ ಇಲ್ಲ, ಪ್ರಜಾತಂತ್ರಕ್ಕೆ ಬೆಲೆಯಿಲ್ಲ. ನಾಳೆ ಸಾಯಂಕಾಲ ಮಾತನಾಡುವಾಗ ಅದನ್ನು ಹೇಳುತ್ತೇವೆ. ಇದರ ಮೇಲೆ ನೀವು ನಾಮಿನೇಷನ್ ಮಾಡಿಬಿಡುತ್ತೇವೆಂದರೆ ಮಾಡಿ. ಯಾರು ಬೇಡವೆಂದು ಹೇಳುತ್ತಾರೆ. ನೀವು 180 ಜನ ಇದ್ದೀರಿ. ನಾವು 35 ಜನ ಇದ್ದೇವೆ. ಜಿಲ್ಲಾಪರಿಷತ್ ಬಿಲ್ಲನ್ನು ತಂದು ಹಣೆಬರಹ ಏನಾಗಿದೆ ಎನ್ನುವುದು ನಿಮಗೆ ಗೊತ್ತಿದೆ.

(ಗೊಂದಲ)

ಶ್ರೀ ಪಿ.ಜಿ. ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ....

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ : ಹಿಂದಿನ ಸರ್ಕಾರ ಇದ್ದಾಗ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳಿಗೆ ನಾಮಿನೇಷನ್ ಆಗಿರುತ್ತದೆ.

ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಜಾಗವನ್ನು ಅಕ್ರಮಣ ಮಾಡಿ ಅಂಗಡಿಗಳನ್ನು ಕಟ್ಟುತ್ತಿರುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಮ್ಮ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಬೆಂಗಳೂರು ನಗರದಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳತಕ್ಕಂಥ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ .....

ಅಧ್ಯಕ್ಷರು : ನನಗೆ ನಿಮ್ಮದು ನೋಟೀಸ್ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನ್ನದು ಒಂದು ಸಬ್‌ಮಿಷನ್‌ಗೆ ತಾವು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು : ಸಬ್‌ಮಿಷನ್‌ಗೆ ಅವಕಾಶವನ್ನು ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ. ಪ್ರತಿಯೊಂದು ಅಂಗಡಿಯಿಂದಲೂ ದುಡ್ಡನ್ನು